ಓದಲು ಪುಸ್ತಕ ಕೊಳ್ಳಬೇಕಿಲ್ಲ. ಗ್ರಂಥಾಲಯಕ್ಕೆ ಹೋಗಬೇಕಿಲ್ಲ. ಬೀದಿಯಲ್ಲಿ ನಡೆಯುವಾಗ ರೈಲು-ಬಸ್ಸಲ್ಲಿ ಪಯಣಿಸುವಾಗ ತಾನೇ ಎದ್ದು ಕಾಣುತ್ತದೆ. ನಮ್ಮ ಹಿರೀಕರು ತಾಮ್ರಪಟ, ಕಲ್ಲು, ತಾಳೆಗರಿ, ಕಾಗದಗಳನ್ನು ಬಳಸಿಕೊಂಡಂತೆ, ಇದು ಗೋಡೆ, ಟ್ರ್ಯಾಕ್ಟರು, ಬಂಡಿ, ಆಟೊ, ಬಸ್ಸು, ಲಾರಿಗಳ ಮೈಯನ್ನೇ ಹಾಳೆ ಮಾಡಿಕೊಂಡಿದೆ. ಕೆಲವು ಪ್ರೇಮಿಗಳು ಪಾರ್ಕಿನ ಮರದ ತೊಗಟೆಗಳ ಚೂಪಾದ ವಸ್ತುವನ್ನೇ ಲೇಖನಿ ಮಾಡಿ ಪ್ರೇಮಕಾವ್ಯ ರಚಿಸಿರುವುದುಂಟು. ಈ ತೊಗಟೆಸಾಹಿತ್ಯ-ಗೋಡೆಸಾಹಿತ್ಯ ರಚಿಸುವಾಗ ಲೇಖಕರು ಸಾರ್ವಜನಿಕರಿಂದ ನಿಂದೆಯನ್ನೋ ಪೆಟ್ಟನ್ನೋ ತಿಂದಿರಬಹುದು. ಇವರ ಬರಹ ನೋಡಿ ಮಂದಿ ಗೇಲಿ ಮಾಡಿರಬಹುದು. ತನ್ನ ಹುಟ್ಟಿನಲ್ಲೇ ನೋವುಂಡಿರುವ ಈ ಸಾಹಿತ್ಯಕ್ಕೆ ಜನರ ನೋವಿಗೆ ಮಿಡಿವ ಗುಣ ಅಂತರ್ಗತವಾಗಿರಲೇಬೇಕು. ಸಾಹಿತ್ಯವು ಆಸ್ಥಾನವನ್ನು ಬಿಟ್ಟು ಬೀದಿಗೆ ಬರಲಿ ಎಂದು ಕ್ರಾಂತಿಕಾರಿಗಳು ಘೋಷಿಸಿದರು. ಆದರೆ, ಅವರ ಸಾಹಿತ್ಯ ಕಪಾಟುಗಳಲ್ಲಿ ಬಂಧಿತವಾಯಿತು. 'ಕಾವ್ಯ ಬಂತು ಬೀದಿಗೆ' ಎಂದು ಹೇಳಿದರು. ಆದರೆ, ಬೀದಿಯಲ್ಲೇ ಹುಟ್ಟಿ ಬದುಕಿ ಬೀದಿಪಾಲಾಗಿ ಹುತಾತ್ಮವಾಗುತ್ತಿರುವ ಸಾಹಿತ್ಯ ಅವರ ಕಣ್ಣಿಗೆ ಕಾಣದೆ ಹೋಯಿತು. ತನ್ನೊಳಗೇ ಇರುವ ದೇವರನ್ನು ಅರಿಯದೆ ತೀರ್ಥಯಾತ್ರೆ ಮಾಡುವವರಂತೆ, ಹಿತ್ತಲಲ್ಲಿ ಮದ್ದಿಟ್ಟುಕೊಂಡು ದವಾಖಾನೆಗೆ ಹೋಗುವವರಂತೆ ಇದು. 'ಜನವಾಣಿ ಬೇರು ಕವಿವಾಣಿ ಹೂವು' ಎಂದು ಆಚಾರ್ಯ ಶ್ರೀಕಂಠಯ್ಯನವರು ಘೋಷಿಸುವಾಗ ಅವರ ಮನಸ್ಸಲ್ಲಿ ಇಂತಹ ಬೀದಿಸಾಹಿತ್ಯವಿತ್ತು ಎಂದು ನನ್ನ ಗುಮಾನಿ.

ಬೀದಿಸಾಹಿತ್ಯದಲ್ಲೆಲ್ಲ ವಾಹನಸಾಹಿತ್ಯದ ಪ್ರಮಾಣವೇ ದೊಡ್ಡದು. ಸರ್ಕಾರಿ ಬಸ್ಸುಗಳ ಮೇಲೆ ತಮ್ಮೂರಲ್ಲಿ ಬಸ್ಸು ನಿಲ್ಲಿಸಬೇಕೆಂದು, ರೈತರು ಸೀಮೆಗೊಬ್ಬರ ಬೇಕೆಂದು, ವಿದ್ಯಾರ್ಥಿಗಳು ಉಚಿತ ಪಾಸು ಬೇಕೆಂದು ಬರೆದಿರುತ್ತಾರೆ. ಬೆಳಗಾವಿ ಭಾಗದಲ್ಲಿ ಗಡಿಜಗಳ ಶುರುವಾದರಂತೂ ಎರಡೂ ರಾಜ್ಯದ ಬಸ್ಸುಗಳು ಮುಷ್ಕರ ಕಲಾವಿದರಿಗೆ ಕ್ಯಾನವಾಸು. ಕೆಲವು ಬಸ್ಸುಗಳಂತೂ ಮೈತುಂಬ ಹಚ್ಚೆಹೊಯ್ಸಿಕೊಂಡಿರುತ್ತವೆ – ಆದಿನಾಥನು ವೃಷಭಾಚಲದಲ್ಲಿ ದಿಗ್ವಿಜಯ ಶಾಸನ ಬರೆಸಲು ಹೋದಾಗ ಬರೆಸಲು ಜಾಗವೇ ಇಲ್ಲದಂತೆ. ನಾನು ಶಿವಮೊಗ್ಗೆಯಲ್ಲಿ ಕಾಲೇಜು ಓದುವಾಗ ನಡೆದ ಮುಷ್ಕರದಲ್ಲಿ, ಬೆಂಗಳೂರಿಗೆ ಹೋಗಿಬರುವ ಕೆಂಪುಬಸ್ಸುಗಳ ಮೇಲೆ ಫೀಸನ್ನು ಕಡಿಮೆ ಮಾಡಬೇಕೆಂದು ಕಪ್ಪನೆಯ ಟಾರಿನಲ್ಲಿ ನಮ್ಮ ನಾಯಕರು ಬರೆದರು. ಈ ಫೀಸು ಸಾಹಿತ್ಯವನ್ನು ಬಸ್ಸುಗಳು ಹೊತ್ತು ತಿರುಗಿದವೇ ಹೊರತು ಬೇಡಿಕೆ ಈಡೇರಲಿಲ್ಲ. ಬದಲಿಗೆ ಬಸ್ಸಿನ ಅಂದ ಹಾಳುಮಾಡಿದರೆಂದು, ವಿದ್ಯಾರ್ಥಿಗಳನ್ನು ಪ್ರಿನ್ಸಿಪಾಲರು ಡಿಬಾರ್ ಮಾಡಿದರು. ಗೋಕಾಕ್ ಚಳವಳಿ ಕಾಲದಲ್ಲಂತೂ ಬಸ್ಸುಗಳು ಕನ್ನಡಪರ ಘೋಷಣೆಯ ಆಭರಣಗಳಿಂದ ಅಲಂಕೃತವಾದವು. ಬರಹಗಳಿಂದ ವಾಹನಗಳ, ಗೋಡೆಗಳ ಅಂದಗೆಡಬಹುದು. ಆದರೆ, ಜನ ಜಾಗೃತವಾಗಿದ್ದಾರೆ, ಡೆಮಾಕ್ರಸಿ ಜೀವಂತವಾಗಿದೆ ಎಂಬುದಕ್ಕೆ ಅವು ಸಾಕ್ಷ್ಯಗಳು. ದೇಶದ ಜನಮಾನಸದೊಳಗೆ ಕುದಿವ ಲಾವಾರಸದ ಕನ್ನಡಿಗಳವು. ಜನ ಯಾವಾಗ ಜಾಗೃತಿ ಕಳೆದುಕೊಂಡು ಗೋಡೆಬರಹ ನಿಲ್ಲಿಸಿದರೋ, ಆ ಜಾಗವನ್ನು ಕಂಪನಿಯ ಜಾಹೀರಾತುಗಳು ಆಕ್ರಮಿಸಿಕೊಂಡವು.

ಬಸ್ಸಿನ ಮೇಲೆ ಮುಷ್ಕರದಾರರಿಗೆ ಜಾಗ ಬಿಡಬಾರದು ಎಂದೋ ಏನೋ, ಸಾರಿಗೆ ಇಲಾಖೆಯೇ ಸಾಹಿತ್ಯ ಬರೆಸಲು ಆರಂಭಿಸಿತು. ಬಸ್ಸು ಎಲ್ಲಿಗೆ ಹೋಗುತ್ತದೆ ಎಂಬ ಬೋರ್ಡು ಸರಿಯಾಗಿ ಕಾಣದಿದ್ದರೂ 'ಟಿಕೆಟ್ ರಹಿತ ಪ್ರಯಾಣಿಕನೇ ಕಾದಿದೆ ನಿನಗೆ ದಂಡ' ಎಂಬ ಬರಹ ಮೈಲಿ ದೂರದಿಂದಲೇ ಕಾಣುತ್ತಿತ್ತು. ಇದನ್ನು ನೋಡುವಾಗ ಇಂತಹ ಬರಹಗಳು ಕನ್ನಡನಾಡಿನಲ್ಲಿ ಟಿಕೇಟುಗಳ್ಳರು ಹೆಚ್ಚಿದ್ದಾರೆ ಎಂದರ್ಥವನ್ನೂ ಕೊಡುತ್ತಿತ್ತು. ಚಾಗದ ಭೋಗದ ಅಕ್ಕರದ ಗೇಯದ ಗೊಟ್ಟಿಯ ಅಲಂಪಿನ ಮಾನಿಸರರೆ ಮಾನಿಸರ್ ಎಂದು ಪಂಪ ಕನ್ನಡಿಗರನ್ನು ಬಣ್ಣಿಸಿದ್ದಕ್ಕೆ ಇದು ವಿರುದ್ಧವಲ್ಲವೇ? ನಮ್ಮ ಮರ್ಯಾದೆಯನ್ನು ನಾವೇ ಕಳೆಯುವುದು ಎಷ್ಟು ಸರಿ? ಎಂಬ ಪ್ರಶ್ನೆ ಸುಳಿಯುತ್ತದೆ. ಆದರೂ ಬೀದಿಸಾಹಿತ್ಯವು ಸಮಾಜದಲ್ಲಿರುವ ಗುಣದೋಷಗಳ ಪ್ರತಿಬಿಂಬ ಎಂಬುದರಲ್ಲಿ ಸಂಶಯವಿಲ್ಲ. ದಯವಿಟ್ಟು ಉಗುಳಬೇಡಿ, ಧೂಮಪಾನ ಮಾಡಬೇಡಿ, ಇಲ್ಲಿ ಕಸ ಹಾಕಬಾರದು, ಚಿಲ್ಲರೆಕೊಟ್ಟು ಸಹಕರಿಸಿ, ಪ್ಲಾಸ್ಟಿಕ್